ಇತ್ಯರ್ಥ ಮಾಡಿರುವುದು ಇವೆಲ್ಲ ಒಂದಕ್ಕೊಂದು ಕೂಡಿಕೊಳ್ಳದ ಬಿಡಿ ಬಿಡಿ ಘಟನೆಗಳು.

ಒಬ್ಬ ಸಾಮಾನ್ಯ ಡ್ರೈವರ್ ರಾಜ್ಯದ ಗೃಹ ಕಾರ್ಯದರ್ಶಿಗೆ ಬ್ಲಾಕ್‌ಮೇಲ್ ಮಾಡುವುದು ಅಂದರೆ ಏನು? ಅವನಿಗೆ ಅಷ್ಟೊಂದು ಧೈರ್ಯ ಎಲ್ಲಿಂದ ಬಂತು? ನಿಜಕ್ಕೂ ಆ ಸಿಡಿ ಇತ್ತಾ? ಇದ್ದರೆ ಅದು ಅಸಲಿಯಾ ಇಲ್ಲ ನಕಲಿಯಾ? ಇಲ್ಲವೇ ಅಸಲಿ ಸಿಡಿಯನ್ನು ನಕಲಿ ಮಾಡಲು ಈ ಪ್ರಕರಣ ದಾಖಲಾಯಿತಾ? ಆ ಸಿಡಿ ನಿಜವಾಗಲೂ ಅಸಲಿಯಾಗಿದ್ದರೆ ಅದರಲ್ಲಿ ಇದ್ದವರು ಗೃಹ ಕಾರ್ಯದರ್ಶಿ ಅವರೇನಾ ಅಥವಾ ಅವರಷ್ಟೇ ಮುಖ್ಯವಾದ ಇನ್ನೊಬ್ಬರಾ?

ಎಲ್ಲಾ ಪ್ರಶ್ನೆಗಳೇ; ಉತ್ತರ ಇಲ್ಲ. ಎಲ್ಲ ಗೋಜಲುಮಯ! ಆದರೆ ಎಸಿಪಿ ಶಿವಣ್ಣ ನಿರ್ಧರಿಸಿ ಆಗಿತ್ತು. 'ಜಗದ ಕಣ್ಣಿಗೆ ಈ ಕೇಸ್ ಮುಗಿಯಿತು. ಆದರೆ ನನಗಲ್ಲ! ಹೇಗಾದರೂ ಮಾಡಿ ಈ ಪ್ರಕರಣದ ಹಿಂದಿರುವ ಸತ್ಯವನ್ನು ತಿಳಿಯಲೇಬೇಕು. ಇದರಲ್ಲಿ ಏನೋ ಮುಚ್ಚಿ ಹಾಕುವ ಕೆಲಸ ನಡೆದಿದೆ. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲರೂ ಏನೋ ಆಟ ಆಡುತ್ತಿದ್ದಾರೆ. ಆ ಆಟ ಆಟಗಾರರಿಗೆ ಮಾತ್ರ ಗೊತ್ತಿದೆ. ಎಲ್ಲರೂ ಮುಖವಾಡ ಧರಿಸಿ ಆಡುತ್ತಿದ್ದಾರೆ. ಯಾರಿಗೂ ಆಟಗಾರರಾರು ಯಾವ ಆಟ ಯಾಕೆ ಆಡುತ್ತಿದ್ದಾರೆ ಎಂಬ ನಿಜ ತಿಳಿಯುತ್ತಿಲ್ಲ ಅಥವಾ ತಿಳಿಯಲು ಬಿಡಲಿಲ್ಲ!!

ಎಸಿಪಿ ಶಿವಣ್ಣನ ನೆನಪಿಗೆ ತಕ್ಷಣ ಬಂದಿದ್ದು ಇನ್‌ಸ್ಪೆಕ್ಟರ್ ಗಂಗಾಧರ. ತನ್ನಂತೆಯೇ ಎಲ್ಲ ವಿಚಾರವನ್ನೂ ಬೇರೆ ಬೇರೆ ದೃಷ್ಟಿಕೋನದಿಂದ ನೋಡುವ ವ್ಯಕ್ತಿ ಎಂಬುದು ನೆನಪಾಗಿ ಜ್ಯೂನಿಯರ್ ಆದ ಅವನು ತನ್ನ ಮಾತನ್ನು ತೆಗೆದುಹಾಕಲಾರ ಎಂದು ಕರೆ ಮಾಡಿದ.

"ಗಂಗಾಧರ್, ಸ್ವಲ್ಪ ಮಾತನಾಡಬೇಕು, ವಿಷಯ ಖಾಸಗಿಯಾದದ್ದು. ಸಾಯಂಕಾಲ ಸರೋವರ್‌ನಲ್ಲಿ ಸಿಗೋಣ" ಎಂದ. ಗಂಗಾಧರನಿಗೆ ಗೊತ್ತಾಯಿತು, ಎಷ್ಟು ಹೊತ್ತಿಗೆ ಸಿಗಬೇಕು ಎಂಬುದು.

"ಸರ್ ನನಗೆ ಎರಡು ದಿನಗಳಿಂದ ಅನುಮಾನ ಇತ್ತು ಸಾರ್... ಕಮಿಷನರ್ ಹತ್ತಿರ ಡಿಸ್ಕಸ್ ಮಾಡಿದೆ. ಅವರೂ ತಲೆ ಕೆಡಿಸಿಕೊಳ್ಳಲಿಲ್ಲ" ಎಂದು ಗಂಗಾಧರ ಎಸಿಪಿ ಶಿವಣ್ಣನ ವಾದ ಸರಣಿ ಕೇಳಿ ನುಡಿದ: "ಕಮಿಷನರ್ ಅದನ್ನು ತಳ್ಳಿ ಹಾಕಿದರು. ಪ್ರೆಸ್‌ನವರಿಗೆ ಸಾಹೇಬರು ಕಂಪ್ಲೇಂಟ್ ಕೊಡಲು ಬರಲಿದ್ದಾರೆ ಎಂಬ ಸುದ್ದಿ ಹೇಗೆ ಸಿಕ್ಕಿತು ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿದರೆ ಈ ಪ್ರಕರಣದ ಇನ್ನೊಂದು ಮುಖದ ಪರಿಚಯ ಆಗಬಹುದು ಅನಿಸುತ್ತದೆ..." ಎಂದ ಉತ್ಸಾಹದಿಂದ.

"ಕೇಳಿದೆ... ಅದ್ಯಾವುದೋ ಅನಾಮಧೇಯ ಕರೆ ಬಂದಿತಂತೆ... ಈ ಸಿಡಿಯ ವಿಚಾರ ಹೇಳಿದರಂತೆ... ನಂತರ ಪತ್ರಕರ್ತರು ಕನ್‌ಫರ್ಮ್ ಮಾಡಿಕೊಳ್ಳಲು ಗೃಹ ಕಾರ್ಯದರ್ಶಿ ಮನೆಗೆ ಫೋನ್ ಮಾಡಿದಾಗ ಅಲ್ಲಿ ಅವರೇ ಹೇಳಿದರಂತೆ, 'ತಾನಾಗಲೇ ಅದನ್ನು ಮಾಡಿದೆ' ಎಂದರಂತೆ" ಎಂದು ಹೇಳಿದ ಶಿವಣ್ಣ ಮಾತು ಮುಂದುವರೆಸುತ್ತ,

"ನನ್ನ ಅನುಮಾನ ಏನೆಂದರೆ, ನಿನ್ನ ಸ್ಟೇಷನ್‌ಗೇ ಯಾಕೆ? ಅವರ ಸ್ವಂತ ಮನೆ ನಿನ್ನ ಏರಿಯಾದಲ್ಲಿ ಇದೆ ಎಂದೆ? ಅಥವಾ ವಿಧಾನಸೌಧ ಸ್ಟೇಶನ್‌ನಲ್ಲಿ ಕೊಟ್ಟರೆ ಎಲ್ಲರ ಕಣ್ಣಿಗೆ ಬೀಳುತ್ತೆ ಅಂತನಾ... ಹಾಗಾದರೆ ಮನೆಯವರು ಯಾಕೆ ಸುಬ್ರಮಣ್ಯಪುರ ಪೊಲೀಸ್ ಸ್ಟೇಷನ್‌ಗೆ ದೂರು ಕೊಡಲು ಹೋಗಿದ್ದಾರೆ ಎಂದರು? ಈ ವಿಚಾರ ಎಲ್ಲಾ ಚಾನಲ್‌ನವರಿಗೂ ಒಂದೇಸಲಕ್ಕೆ ಹೇಗೆ ತಿಳಿಯಿತು? ಇಷ್ಟೆಲ್ಲ ಸ್ಪರ್ಧೆ ಇರುವಾಗ ಒಬ್ಬ ಚಾನೆಲ್‌ನವನು ಇನ್ನೊಬ್ಬ ಚಾನೆಲ್‌ನವನಿಗೆ ಹೇಳುತ್ತಾನಾ... ಎಲ್ಲಿಯೋ ಒಂದು ಮಿಸ್ಸಿಂಗ್‌ಲಿಂಕ್ ಇದೆ... ಇದರ ಸತ್ಯ ತಿಳಿಯಬೇಕಿದೆ ಗಂಗಾಧರ್..."

ಗಂಗಾಧರ ತಲೆ ಆಡಿಸಿದ. ಎಸಿಪಿ ಶಿವಣ್ಣ ತನ್ನ ಬಾಸ್ ಅಲ್ಲದಿದ್ದರೂ ತನ್ನನ್ನು ಕರೆದು ಈ ವಿಚಾರದ ಕುರಿತು ಮಾತನಾಡುತ್ತಿದ್ದಾರೆ ಎಂದರೆ... ಅವನಿಗೇನೋ ಹೆಮ್ಮೆ ಆಯಿತು.